ಇಂದು ದಿಃ **27-03-2025** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಹೆಚ್. ವಕೀಲರಿಂದ ವಾದಿ ಪರಃ**

ನಾವು ಹಂಚಿಕೊಂಡಿದ್ದೇವೆ ಎಂದು ಹೇಳುವ ಜಮೀನುಗಳಲ್ಲಿ, ಮೊದಲು ನನ್ನ ಜಮೀನು ಬರುತ್ತದೆ ಎಂದರೆ ಸರಿ. ನಾನು ಕಾಲು ದಾರಿಯಲ್ಲಿ ನನ್ನ ಜಮೀನಿಗೆ ಹೋಗುತ್ತೇನೆ. ಅಲ್ಲಿ ರಸ್ತೆ ಇಲ್ಲ. ಸುರಹೊನ್ನೆಯಿಂದ ನಮ್ಮ ಜಮೀನಿಗೆ ಹೋಗಲು, ಇರುವ ದಾರಿಯಲ್ಲಿ, ಹೆಚ್.ರಾಮೇಶ್ವರಪ್ಪ ತಂದೆ ಹುಚ್ಚಪ್ಪ, ಯತಿರಾಜ ತಂದೆ ರಾಮೇಶ್ವರಪ್ಪ, ಕಿರಣ ತಂದೆ ರಾಮೇಶ್ವರಪ್ಪ, ಬಸವರಾಜಪ್ಪ ತಂದೆ ಹುಚ್ಚಪ್ಪ, ರಾಘವೇಂದ್ರ ತಂದೆ ಬಸವರಾಜಪ್ಪ, ಗಿರೀಶ ತಂದೆ ಬಸವರಾಜಪ್ಪ ಮತ್ತು ಶ್ರೀಕಾಂತ್ ತಂದೆ ಬಸವರಾಜಪ್ಪ ಇವರ ಜಮೀನುಗಳು ಬರುತ್ತವೆ ಎಂದರೆ ಸರಿ. ಇವರು ಸರ್ವೆ ನಂಬರ್ 26 ರ ಜಮೀನಿನ ಮಾಲೀಕರು ಎಂದರೆ ಸರಿ. ಇವರೆಲ್ಲರೂ ಸೇರಿ ನನ್ನ ತಂದೆಗೆ ನಮ್ಮ ಜಮೀನಿಗೆ ಹೋಗಲು ದಾರಿಗೆ ಒಂದು ಒಪ್ಪಂದ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನಮ್ಮ ಜಮೀನಿಗೆ ಓಡಾಡಲು ರಸ್ತೆ ಇದೆ ಎಂದರೆ ಸರಿಯಲ್ಲ. ನಾನು ನನ್ನ ಅನುಕೂಲಕ್ಕೆ ತಕ್ಕಂತೆ ನಮ್ಮ ಜಮೀನಿಗೆ ಮಾತ್ರ ರಸ್ತೆ ವ್ಯವಸ್ತೆ ಮಾಡಿಕೊಂಡು, ಪ್ರತಿವಾದಿಯರ ಜಮೀನಿಗೆ ಹೋಗುವ ರಸ್ತೆಯನ್ನು ಮುಚ್ಚಿದ್ದೇನೆ ಎಂದರೆ ಸರಿಯಲ್ಲ. ರಸ್ತೆ ಕುರಿತು ವಿಭಾಗಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ವಾದಿಯರಿಗೆ ಬಂದ ಹಿಸ್ಸೆಯಲ್ಲಿ ರಸ್ತೆ ಕಾಣಿಸಿಲ್ಲ ಎಂದರೆ ಸರಿ. ನನ್ನ ತಂದೆಗೆ ವಯಸ್ಸಾಗಿದ್ದು, ಅಸ್ತಮ, ಬಿ.ಪಿ ಮತ್ತು ಶುಗರ್ ಇದ್ದು ಅದರ ದುರುಪಯೋಗ ತೆಗೆದುಕೊಂಡು ನಾನು ಪಾಲುವಿಭಾಗ ಪತ್ರ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಬುದ್ದಿಮಾಂದ್ಯ ಇದ್ದು, ಅದರ ದುರುಪಯೋಗ ತೆಗೆದುಕೊಂಡು ಪಾಲುವಿಭಾಗ ಸೃಷ್ಠಿ ಮಾಡಿದ್ದೇನೆ ಎಂದರೆ

ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಎಲ್ಲರಿಗೂ ಸಮಪಾಲು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.